# ಸಾವಿನ ಕೆಸರ ಮಡುವಿನಿಂದ ಸತ್ಯಗಳ ಉತ್ಖನನ

ಶೀಲಾಳ ಮನೆಯಲ್ಲಿ ನಡೆದ ಘಟನೆಗಳನ್ನು ಪವನ್ ಪೊಲೀಸರ ಮುಂದೆ ಬಾಯಿ ಬಿಡತೊಡಗಿದ.

‘ನಡುವಿನ ಇನ್ನೊಂದು ಬೆಡ್‌ರೂಮಿನಲ್ಲಿ ಸ್ಟೀಲಿನ ಅಲಮೇರಾ ಇತ್ತು. ಅದಕ್ಕೆ ಬೀಗ ಹಾಕಿತ್ತು. ಕೀಲಿಕೈಗಾಗಿ ಹುಡುಕಾಡಿದೆ. ಕಪಾಟಿನ ಮೇಲ್ಭಾಗದಲ್ಲೇ ಸಿಕ್ಕಿಬಿಟ್ಟಿತು. ಬೀಗ ತೆರೆದೆ. ಬಾಗಿಲಿನ ಕೀರಲು ಸದ್ದು. ಸಾವರಿಸಿಕೊಂಡು ಬಾಗಿಲು ತೆರೆದು ನೋಡಿದೆ. ಒಳಗಡೆಯ ಲಾಕರ್‌ಗೂ ಬೀಗ ಹಾಕಿತ್ತು. ಕಪಾಟಿನ ಒಳಗಿನ ಸೀರೆಗಳ ರಾಶಿಯನ್ನೆಲ್ಲ ಎಳೆದು ಹಾಕಿದಾಗ ಲಾಕರ್ ಕೀಲಿಕೈ ಅದೃಷ್ಟವಶಾತ್ ಸೀರೆಗಳ ನಡುವಿನಿಂದ ಕೆಳಕ್ಕೆ ಬಿತ್ತು. ಲಾಕರ್ ತೆರೆದೆ. ಚಿನ್ನದ ರಾಶಿ! ಅಲ್ಲೇ ಇದ್ದ ಕರ್ಚೀಫೊಂದರಲ್ಲಿ ಎಲ್ಲವನ್ನೂ ಕಟ್ಟಲೆತ್ನಿಸಿದೆ. ಚೆಲ್ಲಿಹೋಗುತ್ತಿತ್ತು. ಚೀಲಕ್ಕಾಗಿ ಹುಡುಕಾಡಿದೆ. ಡ್ರಾಯಿಂಗ್ ರೂಮಿನ ಬಾಗಿಲ ಬದಿಯಲ್ಲೇ ಒಂದು ಚೀಲ ಬಿದ್ದಿತ್ತು. ಅದನ್ನೆತ್ತಿ ಅಲ್ಲೇ ಕೊಡವಿದೆ. ಹಣ್ಣು, ಮಾಂಸ, ತರಕಾರಿಗಳೆಲ್ಲ ಚೆಲ್ಲಿಹೋದವು. ಅದೇ ಚೀಲದಲ್ಲಿ ಕರ್ಚೀಫಿನ ಕಟ್ಟನ್ನು ತುಂಬಿಸಿ ಹಿಂದಿನ ಬಾಗಿಲಿನಿಂದ ಹೊರಗೆ ಬಂದೆ. ನೇರವಾಗಿ ಬೈಕ್ ಹತ್ತಿ ಕೊಡವೂರಿಗೆ ಬಂದೆ. ಚಿನ್ನದ ಚೀಲ ನನಗೆ ಸಮಸ್ಯೆಯೇ ಆಯಿತು. ಎಲ್ಲಿರಿಸಲಿ ಎಂದು ತಲೆಕೆಡಿಸಿಕೊಂಡು ಮನೆಗೆ ಹೋಗದೆ ಬೈಕನ್ನು ನೇರವಾಗಿ ಗುಡ್ಡದಪ್ಪನ ದೇವಸ್ಥಾನದ ಕಡೆಗೆ ತಿರುಗಿಸಿದೆ. ದೇವಾಲಯದ ಕಟ್ಟೆಯ ಮರದ ಮೇಲಿನ ಪೊಟರೆಯೊಳಗೆ ಇರಿಸಿದೆ. ಆ ಪೊಟರೆಗಳಲ್ಲಿ ಹಾವುಗಳಿರುತ್ತವೆ ಎಂಬುದು ನಂಬಿಕೆ. ಆ ಭಯದಿಂದ ಯಾರೂ ಅದರ ಹತ್ತಿರ ಸುಳಿಯುತ್ತಿರಲಿಲ್ಲ. ಹೀಗಾಗಿ ಸಮಾಧಾನದಿಂದ ಮನೆಗೆ ಬಂದೆ.



‘ಪತ್ರಿಕೆಯಲ್ಲಿ ಬಂದ ಸುದ್ದಿ ಓದಿ ನೆಮ್ಮದಿಯಿಂದಿದ್ದೆ. ಏಕೆಂದರೆ ಅದರಲ್ಲಿ ನನ್ನ ಹೆಸರಿರಲಿಲ್ಲ. ಆದ್ರೆ ನೀವು ಬಂದು ನನ್ನ ಮೇಲೆ ಕೊಲೆ ಆರೋಪ ಹೊರಿಸಿದಿರಿ. ನಾನು ಯಾರ ಕೊಲೇನೂ ಮಾಡಿಲ್ಲ. ಚಿನ್ನ ಕದ್ದದ್ದು ನಿಜ. ಆದರೆ ಕೊಲೆ ಮಾಡಿಲ್ಲ’ ಎಂದು ಪವನ್ ಅಂಗಲಾಚಿದ.

‘ಬಹಳ ಚೆನ್ನಾಗಿ ಕತೆ ಕಟ್ತೀಯ. ಒಂದು ಸುಳ್ಳು, ಒಂದು ಸತ್ಯ. ಒಂದು ಸುಳ್ಳು, ಒಂದು ಸತ್ಯ. ಚೆನ್ನಾಗಿದೆ, ಚೆನ್ನಾಗಿದೆ. ಇನ್‌ಸ್ಪೆಕ್ಟರ್ ಕಣ್ಣು ಹೊರಳಿಸಿದರು.

‘ಇರ್ಲಿ ಬಿಡಿ ಇನ್ಸ್‌ಪೆಕ್ಟರ್, ಈ ಹಿಂದೆ ಯಾವತ್ತಾದರೂ ಆಕೆಯನ್ನು ಕೊಲ್ಲಬೇಕು ಎಂದು ಅನ್ನಿಸಿದ್ದಿದೆಯಾ?’ ಡಿ.ಎಸ್.ಪಿ. ಪ್ರಶ್ನಿಸಿದರು.

‘ಇಲ್ಲ. ಆಕೆಯನ್ನು ಕೊಲ್ಲಬೇಕು ಎಂಬುದಾಗಿ ಯಾವತ್ತೂ ಅನಿಸಿರಲಿಲ್ಲ. ಆಕೆಯ ಗಂಡನನ್ನು ಕೊಲ್ಲಬೇಕೆಂಬುದಾಗಿ ಅನಿಸಿತ್ತು!’

‘ಯಾಕೆ?’

‘ನನ್ನ–ಶೀಲಾಳ ನಡುವೆ ಆತ ಬಂದದ್ದಕ್ಕೆ’.

‘ಆತನನ್ನು ಕೊಲ್ಲುವ ಪ್ರಯತ್ನಗಳನ್ನೇನಾದರೂ ಮಾಡಿದ್ದೀಯಾ?’

‘.......’

‘ಬೊಗಳೋ ಬೇಗ’ ಇನ್‌ಸ್ಪೆಕ್ಟರ್ ದನಿಯೇರಿಸಿದರು.

‘ಯಾವಾಗ?’ ಡಿ.ಎಸ್.ಪಿ ಕೇಳಿದರು.

‘ಅವರ ಮನೆಯ ಭೂತದ ಕೋಲದಲ್ಲಿ. ಜನಗಳ ಮಧ್ಯದಲ್ಲಿ ಅವರನ್ನು ಕೊಂದರೆ ಯಾರೂ ತಿಳಿಯಲಾರರೆಂದು ಬಾಡಿಗೆ ಕೊಲೆಗಡುಕರನ್ನು ಕರೆತಂದಿದ್ದೆ.’

‘ಮತ್ತೇನಾಯ್ತು?’

‘ಅದಷ್ಟು ಯಶಸ್ವಿಯಾಗಲಿಲ್ಲ. ಆ ಕೆಲಸಕ್ಕಾಗಿ ನೇಮಿಸಿದ್ದ ಮೂರು ಮಂದಿಯಲ್ಲಿ ಒಬ್ಬಾತ ಅವರ ಕೈಗೆ ಸಿಕ್ಕಿಬಿದ್ದ.’

‘ಆಮೇಲೆ?’

‘ಅವನನ್ನು ಕೆಳಕ್ಕೆ ಹಾಕಿ ಅವನ ಹೊಟ್ಟೆ ಮೇಲೆ ಕುಳಿತು ಕುತ್ತಿಗೆ ಹಿಚುಕಿದರು. ಅವರ ರೌದ್ರಾವತಾರ ನೋಡಿ ಅಲ್ಲಿದ್ದವರಿಗೆಲ್ಲ ಗಾಬರಿಯಾಯಿತು. ನನಗೂ ಕೂಡ.’

‘ಮತ್ತೆ?’

‘ಅದನ್ನು ನೋಡಿದ ಯಾರೋ ಒಬ್ಬ ಅಯ್ಯೋ ಸತ್ತ ಅಂತ ಕಿರುಚಿದ. ಅಷ್ಟಕ್ಕೇ ಅವನನ್ನು ಅಲ್ಲೇ ಬಿಟ್ಟು ಓಡಿಹೋದರು.’

‘ಅವ ಸತ್ತಾಂತ ಅಂದ್ಕೊಂಡು ಅಲ್ಲಿಂದ ಓಡಿರಬೇಕು. ನೀನಾದರೆ ಇನ್ನೇನ್ಮಾಡ್ತಿದ್ದೆ?’

‘ನಾನಾದ್ರೂ ಅಷ್ಟೇ ಮಾಡ್ತಿದ್ದೆ.’

‘ಆಮೇಲೆ?’